ಅಧ್ಯಕ್ಷರು :- ಮಂಡಿಸಲಾಯಿತು.

ವಿಷಯ :- ಸೂಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ರಬ್ಬರ್ ತೋಟಗಳಲ್ಲಿ ವೀಡಿಂಗ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 982 (1689)

ಶ್ರೀ ಎಸ್. ಅಂಗಾರ (ಸುಳ್ಯ) :- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1995-96 ನೇ ಸಾಲಿನಲ್ಲಿ ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಸುಳ್ಯ ಐವರ್ನಾಡ ಮತ್ತು ಸುಬ್ರಹ್ಮಣ್ಯ ರಬ್ಬರ್ ವಿಭಾಗದ ಯಾವ ಯಾವ ರೇಂಜ್‌ಗಳಲ್ಲಿ ರಬ್ಬರ್ ತೋಟಗಳಲ್ಲಿ ವೀಡಿಂಡ್ ಮಾಡಲಾಗಿದೆ. ಹಾಗೂ ಎಷ್ಟು ಬಾರಿ ವೀಡಿಂಗ್ ಮಾಡಲಾಗಿದೆ. (ವೀಡಿಂಗ್ ತಗಲಿದ ಖರ್ಚು ಪೂರ್ತಿ ವಿವರ ಒದಗಿಸುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಮಂತ್ರಿಗಳು) :-

ಅ) 1995-96 ನೇ ಸಾಲಿನಲ್ಲಿ ಐವರ್ನಾಡು, ಸುಳ್ಯ, ಮರುನಾಟಿಕೆ ಯೋಜನೆ ಮತ್ತು ಸುಬ್ರಹ್ಮಣ್ಯ ವಿಭಾಗದ ಕೆಳಕಂಡ ಘಟಕಗಳಲ್ಲಿ (ರೇಂಜ್) 3 ಬಾರಿ ವೀಡಿಂಗ್ ಮಾಡಲಾಗಿದೆ. ವೀಡಿಂಗ್‌ಗೆ ತಗಲಿದ ವೆಚ್ಚಗಳ ವಿವರ ಈ ಕೆಳಗಿನಂತೆ ತೋರಿಸಲಾಗಿದೆ.

ಕ್ರ. ಸಂ.	ಘಟಕಗಳು	ವಿಸ್ತೀರ್ಣ (ಹೆ.ಗಳಲ್ಲಿ)	ವೆಚ್ಚ
ಅ)	**ಐವರ್ನಾಡ್ ವಿಭಾಗ :**		
1.	ಆನೆಗುಂಡಿ	183.00	1,85,806-65
2.	ಐವರ್ನಾಡು	386.25	4,36,089-10
3.	ನೆಟ್ಟಾರು	206.30	1,89,374-00
	ಒಟ್ಟು	775.55	8,11,269-75
ಆ)	**ಸುಳ್ಯ ರಬ್ಬರ್ ವಿಭಾಗ :**		
1.	ದುಗಲಡ್ಕ	352.12	3,99,655-00
2.	ಗೋಂಟಕ್ಕ ನಿರ್ವಹಣೆ	322.18	3,65,666-00
3.	ಮೆಡಿನಡ್ಕ	245.08	2,78,122-85
4.	ಕಲ್ಲುಗುಂಡಿ	284.71	3,16,186-05
	ಒಟ್ಟು	1204-15	13,59,629-90

ಇ) ಮರುನಾಟಿ ಯೋಜನೆ ಪುತ್ತೂರು:

1.	ಗೊಂಟಕ್ಕ ಮತ್ತು ಪೆರಿಯಬಾಣೆ ಘಟಕ	195.00	3,04,762-37
	ಒಟ್ಟು	195.00	3,04,762-37

ಈ) ಸುಬ್ರಹ್ಮಣ್ಯ ರಬ್ಬರ್ ವಿಭಾಗ :

1.	ಸುಬ್ರಹ್ಮಣ್ಯ ಘಟಕ	401.88	4,20,954-00
2.	ಕೋಣಾಜೆ ಘಟಕ	544.98	5,68,050-00
3.	ಮುಜೂರು ಘಟಕ	566.34	5,98,419-00
4.	ಕುಮಾರಧಾರ ಘಟಕ	460.37	5,15,414-00
	ಒಟ್ಟು	1973.57	21,02,887-00

ಸುಬ್ರಹ್ಮಣ್ಯ ವಿಭಾಗದಲ್ಲಿ ಬಲಿತ ರಬ್ಬರ್ ತೋಟಗಳಲ್ಲಿ (ಸಾಮಾನ್ಯವಾಗಿ ಎಂಟು ವರುಷ ಮೇಲ್ಪಟ್ಟ ರಬ್ಬರ್ ತೋಟಗಳು) ಮೂರು ಬಾರಿ ವೀಡಿಂಗ್ ಹಾಗೂ ಬಲಿಯದ (ಸಾಮಾನ್ಯವಾಗಿ 1 ವರುಷದಿಂದ ಎಂಟು ವರುಷದವರೆಗೆ) ರಬ್ಬರ್ ತೋಟಗಳಲ್ಲಿ 4 ಬಾರಿ ವೀಡಿಂಗ್ ಕೆಲಸಗಳನ್ನು ಮಾಡಿಸಲಾಗಿದೆ.

ವಿಷಯ :- 1995-96 ನೇ ಸಾಲಿನಲ್ಲಿ ಪ್ರಾರಂಭವಾದ ಸರಕಾರಿ ಪ್ರೌಢ ಶಾಲೆಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 984 (136)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96 ನೇ ಸಾಲಿನಲ್ಲಿ ಸರ್ಕಾರ ರಾಜ್ಯದಲ್ಲಿ ಎಷ್ಟು ಪ್ರೌಢಶಾಲೆಗಳನ್ನು ತೆರೆಯಲು ಉದ್ದೇಶಿಸಿತ್ತು ಹಾಗೂ ಎಷ್ಟನ್ನು ತೆರೆದಿದೆ (ವಿವರ ನೀಡುವುದು)

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) 1995-96 ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿರಲಿಲ್ಲ. ಆದ್ದರಿಂದ ಯಾವುದೇ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿರುವುದಿಲ್ಲ.